211 of IPC. Five persons have been suspected. ಆ ಐದು ಜನರಲ್ಲಿ ದೇವರಾಜ ಪ್ರಕಾಶ್, ಶಿವಣ್ಣ, ಮಾಯಾ ಮತ್ತು ರವಿಶಂಕರ ಓಡಿಹೋಗಿದ್ದಾರೆ Prakash and Shivanna are out on Court Bail. ದೇವರಾಜ ಇನ್ನು ಕಸ್ಟಡಿಯಲ್ಲಿ ಇದ್ದಾನೆ. Ravishankar and Maya are absconding. ಇವರನ್ನು ಅದಷ್ಟು ಬೇಗ ಅರೆಸ್ಟ್ ಮಾಡಲು ಪೋಲೀಸ್‌ನವರು ಪ್ರಯತ್ನಪಡುತ್ತಿದ್ದಾರೆ. ದೇವರಾಜ ಈಗ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇದ್ದಾನೆ. ಪ್ರಕಾಶ್ ಮತ್ತು ಶಿವಣ್ಣ ಕೋರ್ಟ್ ಬೇಲ್ ಮೇಲೆ ಹೊರಗಡೆ ಬಂದಿದ್ದಾರೆ. ಆದಷ್ಟು ಬೇಗ ಮಾಯಾ ಮತ್ತು ರವಿಯನ್ನು ಅರೆಸ್ಟ್ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ. ಮತ್ತು ಬಸವರಾಜ ಅವರ ತಂದೆಯವರು ಪೋಲೀಸ್ ಸ್ಟೇಷನ್‌ಗೆ ವಿಚಾರಿಸಲು ಹೋದಾಗ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು ಬೆದರಿಸಿ ಹೊಡಿದ್ದಿದ್ದಾರೆ ಎನ್ನುವ ವಿಚಾರವನ್ನು ನಾನು ಎಸ್‌ಪಿ ಮತ್ತು ಡಿಐಜಿರವರ ಹತ್ತಿರ ಮಾತನಾಡಿ ಏಕೆ ಆಯಿತು ಎಂದು ವಿಚಾರಿಸಿ, ಈ ರೀತಿ ನಡೆದುಕೊಂಡವರ ಮೇಲೆ ತಕ್ಷಣ ಕ್ರಮತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಎಸ್. ಅಂಗಾರರವರು.

ಸುಳ್ಯ ತಾಲ್ಲೂಕಿನ ಪಂಜ ವ್ಯವಸಾಯ ಬ್ಯಾಂಕಿನ ರೈತರಿಗೆ ಆಗಿರುವ ಅನ್ಯಾಯ

ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಉಪಾಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಪಂಜ ವ್ಯವಸಾಯ ಬ್ಯಾಂಕಿನ ಕಾರ್ಯದರ್ಶಿಯವರು ರೈತರನ್ನು ಮೋಸಗೊಳಿಸಿ, ಸುಳ್ಳು ದಾಖಲೆ ಮತ್ತು ನಕಲಿ ಸಹಿ ಹಾಕಿ ಅನೇಕ ರೈತರ ಹೆಸರಿನಲ್ಲಿ ಮಿತಿಗಿಂತ ಹೆಚ್ಚಿನ ಸಾಲವನ್ನು ನಮೂದಿಸಿ ಹಣವನ್ನು ಕಟ್ಟದೆ ಮೋಸಗೊಳಿಸಿದ ಪರಿಣಾಮವಾಗಿ ಈಗಾಗಲೇ ಸುಮಾರು ನಾಲ್ಕುನೂರು ಕುಟುಂಬಗಳ ಜಪ್ತಿ ಮಾಡಲು ಎಲ್ಲಾ ರೀತಿಯ ಕಡತಗಳು ತಯಾರು ಆಗಿವೆ, ಜಪ್ತಿ ಆದರೆ ಅನೇಕ ಸಣ್ಣ ರೈತರ ಕುಟುಂಬಗಳು ಬೀದಿ ಪಾಲು ಆಗುವ ಸಾಧ್ಯತೆ ಇದೆ. ಈಗಾಗಲೇ ಕಾರ್ಯದರ್ಶಿಯವರನ್ನು ಅಮಾನತ್ತುಗೊಳಿಸಿದ್ದು ಸೆಕ್ಷನ್ 63ರ ಕೆಳಗೆ ತನಿಖೆ ನಡೆಯುತ್ತಿರುವ ಹಂತದಲ್ಲಿ ಯಾವ ರೈತರಿಂದಲೂ ಬಲಾತ್ಕಾರವಾಗಿ ವಸೂಲಿ ಮಾಡಬಾರದು ಹಾಗೂ ನಿರಪರಾಧಿ ರೈತರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು. ಈ ರೈತರನ್ನು ಮೋಸಗೊಳಿಸಿ ನಕಲಿ ಸಹಿ ಹಾಕಿ ಹಣವನ್ನು ಮಾಡಿಕೊಂಡು ಅಪಾರ ಆಸ್ತಿಯನ್ನು ಹೊಂದಿರುವ ಕಾರ್ಯದರ್ಶಿಯವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ನಿರಪರಾಧಿ ರೈತರ ಹೆಸರಿನಲ್ಲಿ ಇರುವ ಸಾಲವನ್ನು ಕಾರ್ಯದರ್ಶಿಯವರ ಆಸ್ತಿಯಿಂದ ಭರಿಸಬೇಕು ಎಂದು ಈ ಬಗ್ಗೆ ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದಂತೆ ಈಗಾಗಲೆ ಸೆಕ್ಷನ್ 63ರ ಕೆಳಗೆ ತನಿಖೆ ಮಾಡಿದ್ದೇವೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಅಲ್ಲಿ ಏನಾದರೂ ಖೊಠಿಯಾಗಿ ನಡೆದಿದ್ದರೆ ಇದರಿಂದ ರೈತರಿಗೆ ಯಾವುದೇ ತರಹದ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

ಉಪಾಧ್ಯಕ್ಷರು : ಟಿ.ಬಿ. ಜಯಚಂದ್ರರವರು